JANUARY 20, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಈ ತಿಂಗಳಾಂತ್ಯಕ್ಕೆ ಅಥವಾ ಫೆಬ್ರುವರಿಯಲ್ಲಿ ನಡೆಯಲಿರುವ, ಎಸ್.ಎಸ್.ಎಲ್.ಸಿ. ಪೂರ್ವ ಸಿದ್ಧತಾ ಪರೀಕ್ಷೆ 2 ಮತ್ತು 3 ರಲ್ಲಿ, ಲೋಪಗಳಾಗದಂತೆ ತಡೆಯಲು, ಹೊಸ ಕಾರ್ಯಾಚರಣೆ ವಿಧಾನ, ಎಸ್.ಓ.ಪಿ. ಜಾರಿಗೊಳಿಸಿ, ಶಿಕ್ಷಣ ಇಲಾಖೆ, ಆದೇಶಿಸಿದೆ. ಇಲಾಖೆ ಆಯುಕ್ತರ ಕಚೇರಿ ಮೇಲ್ವಿಚಾರಣೆಯಲ್ಲಿ ಈ ಬಾರಿ ಪರೀಕ್ಷೆ ನಡೆಯಲಿದೆ. ಪ್ರೌಢ ಶಿಕ್ಷಣ ನಿರ್ದೇಶಕರನ್ನು ಹಾಗೂ ಕಲಬುರಗಿ ಮತ್ತು ಧಾರವಾಡ ವಿಭಾಗಗಳಿಗೆ, ಆಯಾ ಅಪರ ಆಯುಕ್ತರ ಕಚೇರಿ ನಿರ್ದೇಶಕರನ್ನು, ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ. ಪರೀಕ್ಷಾ ದಿನಗಳಂದು, ಬೆಳಗ್ಗೆ 9 ಗಂಟೆಗೆ ಶಾಲೆ ಆರಂಭವಾಗಲಿದೆ. ಮಕ್ಕಳು ಹಾಜರಿರುವುದು ಕಡ್ಡಾಯ. ಪರೀಕ್ಷೆ ಬೆಳಗ್ಗೆ 10ರ ಬದಲು, 11 ಗಂಟೆಗೆ ಆರಂಭಿಸಲು, ಸೂಚಿಸಲಾಗಿದೆ.

<><><>

ಎಸ್.ಎಸ್.ಎಲ್.ಸಿ. ಪರೀಕ್ಷೆಯ, ಫಲಿತಾಂಶವನ್ನು ಮತ್ತಷ್ಟು ಉತ್ತಮ ಪಡಿಸಲು, ಪೂರ್ವಭಾವಿ ಸಿದ್ಧತಾ ಪರೀಕ್ಷೆಗಳಿಗೆ, ಹೆಚ್ಚಿನ ಮಹತ್ವ ನೀಡುವಂತೆ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗದ ಅಪರ ಆಯುಕ್ತ ರಾಹುಲ ಪಾಂಡ್ವೆ, ಯಾದಗಿರಿ ಜಿಲ್ಲೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>

ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ – ಸಿ.ಬಿ.ಎಸ್.ಇ. ಮಾದರಿಯಲ್ಲಿ, ರಾಜ್ಯದ ಪಠ್ಯ ಕ್ರಮದಲ್ಲಿ, ಎಸ್.ಎಸ್.ಎಲ್.ಸಿ. ಗಣಿತ ಪರೀಕ್ಷೆಗೆ, ಸರಳ ಗಣಿತ ಮತ್ತು ಸಾಮಾನ್ಯ ಗಣಿತ ಎಂಬ, ಎರಡು ರೀತಿಯ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿ, ಯಾವ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆಯಬಹುದು ಎಂಬ ಆಯ್ಕೆಯನ್ನು, ವಿದ್ಯಾರ್ಥಿಗಳಿಗೆ ಬಿಡುವ, ನೀತಿಯನ್ನು ಜಾರಿಗೆ ತರುವಂತೆ, ವಿವಿಧ ಖಾಸಗಿ ಶಾಲೆಗಳ ಒಕ್ಕೂಟ, ರಾಜ್ಯ ಸರ್ಕಾರವನ್ನು ಒತ್ತಾಯಿಸಿವೆ. ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಆಡಳಿತ ಮಂಡಳಿ ಒಕ್ಕೂಟ (ಕಾಮ್ಸ್), ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿ ಪದಾಧಿಕಾರಿಗಳು, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ ಅವರಿಗೆ, ಬೆಂಗಳೂರಿನಲ್ಲಿ ಮನವಿ ಸಲ್ಲಿಸಿದ್ದಾರೆ.

<><><>

ದೇಶದ ಆರ್ಥಿಕ ಸ್ಥಿತಿ ಸುದೃಢತೆಗೆ, ಸಣ್ಣ, ಸೂಕ್ಷ್ಮ ಮತ್ತು ಮಧ್ಯಮ ಕೈಗಾರಿಕೆಗಳು, ಮಹತ್ವದ ಕೊಡುಗೆ ನೀಡುತ್ತಿವೆ ಎಂದು, ದಾವಣಗೆರೆ ಜಿಲ್ಲೆ, ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕ, ಆರ್.ಗಣೇಶ ತಿಳಿಸಿದ್ದಾರೆ. ದಾವಣಗೆರೆಯಲ್ಲಿ ಜರುಗಿದ, ಎಂ.ಎಸ್.ಎಂ.ಇ. ಗಳ ಕಾರ್ಯಕ್ಷಮತೆ ಹೆಚ್ಚಿಸಿ, ವೇಗವರ್ಧಿಸುವ, ಯೋಜನೆಯಡಿ, ನವೋದ್ಯಮಿಗಳಿಗೆ ಆಯೋಜಿಸಿದ್ದ, ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

<><><>

ಆರ್.ಗಣೇಶ ಧ್ವನಿ 40 ಸೆಕೆಂದುಗಳು

<><><>

ಗದಗ ಜಿಲ್ಲೆ, ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ, ನಾಲ್ಕನೇ ದಿನವಾದ ನಿನ್ನೆ, ಉತ್ಖನನದ ವೇಳೆ, ಶಿಲಾಯುಗದ ಆಯುಧ ಮಾದರಿ ಕಲ್ಲು, ಲೋಹದ ಘಂಟೆ ಪತ್ತೆಯಾಗಿದೆ. ಈ ಮಧ್ಯೆ ಉತ್ಖನನ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು, 8 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದು, 374 ರೂಪಾಯಿ ದೈನಂದಿನ ಕೂಲಿ ಬದಲು, 600 ರೂಪಾಯಿಗೆ ಹೆಚ್ಚಿಸುವಂತೆ, ಒತ್ತಾಯಿಸಿದರು. ಹಿರಿಯ ಅಧಿಕಾರಿಗಳು, ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

<><><>

ವಿಶ್ವ ಆರ್ಥಿಕ ವೇದಿಕೆಯ, ವಾರ್ಷಿಕ ಸಮಾವೇಶದಲ್ಲಿ ಪಾಲ್ಗೊಳ್ಳಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಹಿನ್ನೆಲೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಇಂದು, ಸ್ವಿಟ್ಜರ್‌ಲ್ಯಾಂಡ್ ನ ದಾವೋಸ್‌ಗೆ ಪ್ರಯಾಣ ಬೆಳೆಸಲಿದ್ದಾರೆ.

<><><>

ಸ್ವಿಟ್ಜರ್‌ಲ್ಯಾಂಡ್‌ನ ಹಿಮಾಚ್ಛಾದಿತ ನಗರಿ ದಾವೋಸ್‌ನಲ್ಲಿ, ನಿನ್ನೆ ಆರಂಭಗೊಂಡ, ಐದು ದಿನಗಳ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ, ಭಾರತ ಸರ್ಕಾರದ ಪ್ರತಿನಿಧಿಯಾಗಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ, ಮೂವರು ಕೇಂದ್ರ ಸಚಿವರು ಪಾಲ್ಗೊಂಡಿದ್ದಾರೆ. ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಪಾಲ್ಗೊಂಡ, ಕರ್ನಾಟಕದ ಮೊದಲ ಕೇಂದ್ರ ಸಚಿವ ಎಂಬ ಹೆಗ್ಗಳಿಕೆಗೆ, ಜೋಶಿ ಪಾತ್ರರಾಗಿದ್ದಾರೆ.

<><><>

ರಾಜ್ಯದ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಸೇರಿದಂತೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ, ಐದು ಮಹಾನಗರ ಪಾಲಿಕೆಗಳ ಜೊತೆಗೆ, ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು, ಮೇ ಅಥವಾ ಜೂನ್ ತಿಂಗಳಾಂತ್ಯದೊಳಗೆ, ಮತ ಪತ್ರ, ಬ್ಯಾಲೆಟ್ ಪೇಪರ್ ಬಳಸಿ, ನಡೆಸಲಾಗುವುದು ಎಂದು, ರಾಜ್ಯ ಚುನಾವಣಾ ಆಯೋಗದ ಆಯುಕ್ತ, ಜಿ.ಎಸ್. ಸಂಗ್ರೇಶಿ ತಿಳಿಸಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ, ಐದು ಮಹಾನಗರ ಪಾಲಿಕೆಗಳ, 369 ವಾರ್ಡ್‌ಗಳ, ಕರಡು ಮತದಾರರ ಪಟ್ಟಿ ಪ್ರಕಟಿಸಿ ಮಾತನಾಡಿದ ಅವರು, ಈ ವಿಷಯ ತಿಳಿಸಿದರು.

<><><>

ಈ ಮಧ್ಯೆ, ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು, ಏಕ ಕಾಲಕ್ಕೆ ನಡೆಸುವ ಚಿಂತನೆ, ರಾಜ್ಯ ಸರ್ಕಾರ ಹೊಂದಿದೆ, ಎಂದರು.

<><><>

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ – ಮನರೇಗಾ ಹಿಂಪಡೆದ ಬಗ್ಗೆ ಹಾಗೂ ಕೇಂದ್ರ ಸರ್ಕಾರ ಜಾರಿಗೊಳಿಸಿರುವ, ವಿಕಸಿತ ಭಾರತ ಜಿ ರಾಮ್ ಜಿ ಯೋಜನೆ ಕುರಿತು, ಚರ್ಚಿಸಲು, ಇದೇ 26ನೇ ತಾರೀಖು, ಪ್ರಜಾ ರಾಜ್ಯೋತ್ಸವದಂದು, ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ವಿಶೇಷ ಸಭೆ ನಡೆಸುವಂತೆ, ರಾಜ್ಯ ಸರ್ಕಾರ ಸೂಚಿಸಿದೆ. ಪಂಚಾಯಿತಿ ರಾಜ್ ಇಲಾಖೆ ಆಯುಕ್ತರಾದ, ಅರಂಧತಿ, ರಾಜ್ಯದ ಎಲ್ಲ ಜಿಲ್ಲಾ ಪಂಚಾಯ್ತಿ ಸಿ.ಇ.ಓ.ಗಳಿಗೆ, ನಿರ್ದೇಶನ ನೀಡಿ, ಆದೇಶಿಸಿದ್ದಾರೆ.

<><><>

ಮಿಷನ್ ಒಲಿಂಪಿಕ್ಸ್ ಗೇಮ್ಸ್ ಅಸೋಸಿಯೇಷನ್ ವತಿಯಿಂದ, ಥಾಯ್ಲೆಂಡಿನಲ್ಲಿ ನಡೆದ, ಅಂತಾರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಶಿಪ್ –2026, 61 ಕಿಲೋ ತೂಕದವರ ವಿಭಾಗದಲ್ಲಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಉಣಕಲ್ಲ ಗ್ರಾಮದ, ವಿಕ್ರಮ ಚಿಲ್ಲಣ್ಣವರ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಾಯುಪುತ್ರ ಸ್ಪೋರ್ಟ್ಸ್ ಫೌಂಡೇಷನ್ ಅಧ್ಯಕ್ಷ, ಅಶೋಕ ಚಿಲ್ಲಣ್ಣವರ, ಹುಬ್ಬಳ್ಳಿಯಲ್ಲಿ ಮಾತನಾಡಿ, ಬೆಳ್ಳಿ ಪದಕ ವಿಜೇತ ವಿಕ್ರಮ ಚಿಲ್ಲಣ್ಣವರ ಇಂದು ಸಂಜೆ, ಹುಬ್ಬಳ್ಳಿಗೆ ಆಗಮಿಸಲಿದ್ದು, ಉಣಕಲ್ಲ ಶ್ರೀ ಕಲ್ಮೇಶ್ವರ ದೇವಸ್ಥಾನದಲ್ಲಿ, ಅಭಿನಂದನಾ ಸಮಾರಂಭ ಜರುಗಲಿದೆ, ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.